2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ105/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವನಜಾಕ್ಷಿ | ಪಿಡಬ್ಲ್ಯೂ - 6 |
| ಗಂಡನ ಹೆಸರು | - | ಡಿ ಜಿ ಗಿರೀಶ್ | ಸಿಡಬ್ಲ್ಯೂ - 9 |
| ವಯಸ್ಸು | - | 44 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ದಂದೂರು | |

ದಿನಾಂಕಃ 26.08.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಆರೋಪಿ ಧರ್ಮರಾಜ್ ನನ್ನ ಅಳಿಯ. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ತಾಯಿ ತಂದೆ, 4 ನೇ ಆರೋಪಿ 1 ನೇ ಆರೋಪಿಯ ಅಣ್ಣ. ಭಾಗ್ಯ 2 ನೇ ಆರೋಪಿಯ ತಂಗಿ ಮತ್ತು ಮೂರ್ತಪ್ಪ ಸದರಿ ಭಾಗಳ ಗಂಡ. ಗೌತಮ್ ಮತ್ತು ಹರ್ಷಿತಾ ಅಲಿಯಾಸ್ ಮಾನ್ಯ ಶ್ರೀ ಮೇಲೆ ಹೇಳಿದ ಭಾಗ್ಯ ಮತ್ತು ಮೂರ್ತಪ್ಪನ ಮಕ್ಕಳು. ವಿನಯ್ 2 ನೇ ಆರೋಪಿಯ ತಮ್ಮನ ಮಗ. ಸುಶೀಲಮ್ಮ 2 ನೇ ಆರೋಪಿಯ ತಾಯಿ.

2. ಚಾಸಾ.1 ನನ್ನ ಗಂಡ. ಚಾಸಾ.10 ನನ್ನ ಮಗಳು. ಚಾಸಾ.11 ನನ್ನ ಭಾವ ಅಂದರೆ ನನ್ನ ಗಂಡನ ಅಣ್ಣ. ಚಾಸಾ.12 ನನ್ನ ಸಂಬಂಧಿ. ಚಾಸಾ.13 ಗೊತ್ತು, ಆತ 1 ನೇ ಆರೋಪಿಯ ಊರಿನವರು. ಚಾಸಾ.14 ನನ್ನ ಸಂಬಂಧಿ. ಉಳಿದ

ಸಾಕ್ಷಿದಾರರು ಗೊತ್ತಿಲ್ಲ.

3. ಮೃತೆ ಲತಾ ನನ್ನ ಮೊದಲನೇ ಮಗಳು. ನನ್ನ ಎರಡನೇ ಮಗಳು ಚಾಸಾ.10 ಶಿಲ್ಪಾ ಮತ್ತು ನನಗೆ ಒಬ್ಬ ಮಗನಿದ್ದಾನೆ, ಅವನ ಹೆಸರು ಉದಯ.

4. ಲತಾ ಈಗ್ಗೆ 3 ವರ್ಷಗಳ ಹಿಂದೆ ಮೃತ ಪಟ್ಟಿದ್ದಾಳೆ. ಆಕೆಯನ್ನು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಮೇಲೆ ಹೇಳಿದ ಅವರ ಸಂಬಂಧಿಕರು ಸೇರಿ ನನ್ನ ಮಗಳು ಲತಾಳನ್ನು ಕೊಲೆ ಮಾಡಿದ್ದಾರೆ. 2019 ನೇ ಇಸವಿಯಲ್ಲಿ ಮೃತೆ ಲತಾ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ದ್ವಿತೀಯ ವರ್ಷದ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದಳು ಆ ಸಮಯದಲ್ಲಿ ಆಕೆ ಹಾಸ್ಟೆಲ್ ನಲ್ಲಿ ಇದ್ದಳು. ಆ ಸಮಯದಲ್ಲಿ ನನ್ನ ಎರಡನೇ ಮಗಳಾದ ಶಿಲ್ಪಾ ಚಿಕ್ಕಮಗಳೂರಿನ ಜೂನಿಯರ್ ಕಾಲೇಜಿನಲ್ಲಿ ಪಿ ಯು ಸಿ ಓದುತ್ತಿದ್ದಳು ಮತ್ತು ಆಕೆಯು ಸಹ ಹಾಸ್ಟೆಲಿನಲ್ಲಿ ನೆಲೆಸಿದ್ದಳು. ಮಗ ಉದಯ್ ಸಿಂದಿಗೆರೆಯ ಮೊರಾರ್ಜಿ ಶಾಲೆಯಲ್ಲಿ 7 ನೇ ತರಗತಿ ವ್ಯಾಸಂಗ ಮಾಡುತ್ತಿದ್ದನು. ನಾನು ಮತ್ತು ನನ್ನ ಗಂಡ ದಂದೂರಿನಲ್ಲಿ ವ್ಯವಸಾಯ ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದೆವು.

5. ಆರೋಪಿತರು ಬುಕ್ಕಾಂಬೂದಿ ಗ್ರಾಮದವರು. ಆ ಸಮಯದಲ್ಲಿ 2 ನೇ ಆರೋಪಿ ಬುಕ್ಕಾಂಬೂದಿ ಗ್ರಾಮದಲ್ಲಿ ಅಂಗನವಾಡಿ ಟೀಚರ್ ಆಗಿ ಕೆಲಸ ಮಾಡುತ್ತಿದ್ದಳು ಮತ್ತು 2 ನೇ ಆರೋಪಿಯ ತಂಗಿಯಾದ ಭಾಗ್ಯಳ ಗಂಡ ಮೂರ್ತಪ್ಪ

ಪೊಲೀಸ್ ಉಪ ನಿರೀಕ್ಷಕನಾಗಿ ಕೆಲಸ ಮಾಡುತ್ತಿದ್ದನು. 1 ನೇ ಆರೋಪಿ, 2 ಮತ್ತು 3 ನೇ ಆರೋಪಿತರ ಕಿರಿಯ ಮಗ.

6. 2019 ನೇ ಇಸವಿಯಲ್ಲಿಯೇ ನನ್ನ ಮಗಳಾದ ಲತಾ ಹಾಸ್ಟೆಲ್ ನಲ್ಲಿ ಇದ್ದ ಸಮಯದಲ್ಲಿ 1 ನೇ ಆರೋಪಿ ಮದುವೆ ಮಾಡಿಕೊಂಡಿದ್ದನು. ಆ ಸಮಯದಲ್ಲಿ ಲತಾಳ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಒಂದು ವಾರದ ನಂತರ ನನಗೆ ದಂಡೂರಿನ ಗ್ರಾಮಸ್ಥರಿಂದ 1 ನೇ ಆರೋಪಿ ಲತಾಳನ್ನು ಮದುವೆ ಮಾಡಿಕೊಂಡಿರುವ ವಿಚಾರ ತಿಳಿಯಿತು. 1 ನೇ ಆರೋಪಿಯ ತಂಗಿಯಾದ ಭಾಗ್ಯ ಮತ್ತು ಆಕೆಯ ಗಂಡನಾದ ಮೂರ್ತಪ್ಪ ಲತಾಳ ಹಾಸ್ಟೆಲ್ ಗೆ ಹೋಗಿ ಆಕೆಗೆ ಪೊಲೀಸ್ ಕೆಲಸವನ್ನು ಕೊಡಿಸುವುದಾಗಿ ಹೇಳಿ ಆಕೆಗೆ 1 ನೇ ಆರೋಪಿಯನ್ನು ಮದುವೆಯಾಗುವಂತೆ ಹೇಳಿ, ಆಕೆಯನ್ನು ಕಲ್ಲತ್ತಗಿರಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿದ್ದಾಗಿ ಅಲ್ಲಿಗೆ ಧರ್ಮರಾಜು, ಸುವರ್ಣಮ್ಮ, ಬಸವರಾಜು, ಭುವನೇಶ್, ಭಾಗ್ಯ, ಮೂರ್ತಪ್ಪ, ಹರ್ಷಿತ, ಭಾಗ್ಯಾಳ ಮಗ, ವಿನಯ್, ಸುಶೀಲಮ್ಮ ರವರು ಹೋಗಿ ಅಲ್ಲಿ ಅವರೆಲ್ಲರೂ ಸೇರಿ ಲತಾಳ ಮದುವೆಯನ್ನು 1 ನೇ ಆರೋಪಿಯೊಂದಿಗೆ ನೆರವೇರಿಸಿದ್ದಾಗಿ ತಿಳಿಯಿತು.

7. ನನಗೆ ಮದುವೆಯ ವಿಷಯ ತಿಳಿದಾಗ ಲತಾಳು ಬುಕ್ಕಾಂಬೂದಿಯಲ್ಲಿರುವ ಆರೋಪಿಯ ಮನೆಯಲ್ಲಿರುವುದಾಗಿ ತಿಳಿಯಿತು. ನಂತರ ನಾನು

ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಗೆ ಹೋಗಿದ್ದೆನು. ಅಲ್ಲಿ ನನ್ನ ಮಗಳು ಲತಾ, 1 ಮತ್ತು 2 ನೇ ಆರೋಪಿತರು ಇದ್ದರು. ಆಗ ನಾನು ಲತಾಳನ್ನು ಕುರಿತು ಮನೆಗೆ ಬರುವಂತೆ ಕರೆದೆನು, ಆದರೆ ಆಕೆ ತನ್ನ ಮದುವೆ 1 ನೇ ಆರೋಪಿಯೊಂದಿಗೆ ಆಗಿರುವುದಾಗಿ ಹೇಳಿ, ಮನೆಗೆ ಬರುವುದಿಲ್ಲವೆಂದು ಹೇಳಿದಳು. ಆಗ ನಾನು ಲತಾಳಿಗೆ ಬೈದಾಗ ನಾವು ಅವಳಿಗೆ ಕೊಡಿಸಿದ್ದ ಒಂದು ಮೊಬೈಲನ್ನು ತಂದು ನನ್ನ ಕೈಗೆ ಕೊಟ್ಟಳು.

8. ನಾನು ಸದರಿ ಮೊಬೈಲನ್ನು ತೆಗೆದುಕೊಂಡು ಮನೆಗೆ ಹೋಗಿ ನನ್ನ ಗಂಡ ಮತ್ತು ಸಂಬಂಧಿಕರಿಗೆ ಲತಾಳ ಮದುವೆಯಾಗಿರುವ ಬಗ್ಗೆ ತಿಳಿಸಿದೆನು. ಮದುವೆಯಾದ ಬಳಿಕ ಒಂದು ತಿಂಗಳ ಕಾಲ ಲತಾ ಮತ್ತು 1 ನೇ ಆರೋಪಿ ಚೆನ್ನಾಗಿರುವುದಾಗಿ ನಮ್ಮ ದಂದೂರಿನಿಂದ ಬುಕ್ಕಾಂಬೂದಿಗೆ ಕೆಲಸಕ್ಕೆ ಹೋಗುತ್ತಿದ್ದ ಗ್ರಾಮಸ್ಥರಿಂದ ತಿಳಿಯಿತು. ಒಂದು ತಿಂಗಳಾದ ಬಳಿಕ ಆರೋಪಿತರು ಲತಾಳಿಗೆ ಹಿಂಸೆ ಕೊಡುತ್ತಿರುವುದಾಗಿ ಸದರಿ ಗ್ರಾಮಸ್ಥರಿಂದ ತಿಳಿಯಿತು. ನಂತರ ಆರೋಪಿತರು ಹಿಂಸೆ ಕೊಡುತ್ತಿದ್ದುದರಿಂದ ಲತಾ ವಿಷ ಕುಡಿದಾಗ ಆರೋಪಿತರು ಲತಾಳನ್ನು ಗಂಗಗೊಂಡನಹಳ್ಳಿಯ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆಕೆಗೆ ಹುಷಾರಿಲ್ಲವೆಂದು ಹೇಳಿ ಆಕೆಗೆ ಔಷಧಿ ಕೊಡಿಸಿದ್ದಾಗಿ ಗಂಗಗೊಂಡನಹಳ್ಳಿಯಲ್ಲಿರುವ ನಮ್ಮ ಸಂಬಂಧಿಕರಿಂದ

ತಿಳಿಯಿತು. ಆರೋಪಿತರು ಮತ್ತು ನನ್ನ ಮಗಳು ಸರಿ ಹೋಗಬಹುದೆಂದು ನಾನು ಸುಮ್ಮನಾದೆನು.

9. ಆದರೆ ಪುನಃ ಆರೋಪಿತರು ಲತಾಳಿಗೆ ಊಟ ಕೊಡದೇ, ಸ್ನಾನಕ್ಕೆ ಹೋಗಲು ಬಿಡದೇ ಹಿಂಸೆ ಕೊಡುತ್ತಿದ್ದಾಗಿ ದಂಡೂರಿನಿಂದ ಬುಕ್ಕಾಂಬೂದಿಗೆ ಕೆಲಸಕ್ಕೆ ಹೋಗುತ್ತಿದ್ದವರ ಬಳಿ ಲತಾ ಹೇಳಿಕೊಂಡಿದ್ದಳು. ಆ ವಿಚಾರ ನನಗೆ ಸದರಿ ದಂಡೂರಿನ ಗ್ರಾಮಸ್ಥರಿಂದ ತಿಳಿಯಿತು.

10. ಮದುವೆಯಾದ ಮೂರು ತಿಂಗಳ ಬಳಿಕ 2 ರಿಂದ 4 ನೇ ಆರೋಪಿತರು ಶಿವನಿಯಲ್ಲಿ ಬೇರೆ ಮನೆಯನ್ನು ಮಾಡಿಕೊಂಡು ಇರುವುದಾಗಿ ಮತ್ತು ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಸ್ವಂತ ಮನೆಯಲ್ಲಿ 1 ನೇ ಆರೋಪಿ ಮತ್ತು ಲತಾ ಇರುವುದಾಗಿ ತಿಳಿಯಿತು. 1 ನೇ ಆರೋಪಿ ಡ್ರೈವಿಂಗ್ ಕೆಲಸ ಮಾಡಿಕೊಂಡಿದ್ದನು. ಆದರೆ ಆ ಸಮಯದಲ್ಲಿಯೂ ಸಹ ಆರೋಪಿತರು ಲತಾಳಿಗೆ ಸರಿಯಾಗಿ ಊಟ ಕೊಡದೇ, ನೀರಿನ ನಲ್ಲಿಯನ್ನು ಮತ್ತು ಕರೆಂಟನ್ನು ಆರೋಪಿತರು ಕಿತ್ತು ಹಾಕಿ ಲತಾಳಿಗೆ ಹಿಂಸೆ ಕೊಡುತ್ತಿದ್ದಾಗಿ ತಿಳಿಯಿತು. ಲತಾಳಿಗೆ ಸರಿಯಾಗಿ ಊಟವನ್ನು ತಂದು ಹಾಕದಿದ್ದರಿಂದ ಆಕೆ ಬುಕ್ಕಾಂಬೂದಿಯಲ್ಲಿ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಳು. ಸದರಿ ಅಂಗಡಿಗೆ ನಮ್ಮ ಊರಿನವರು ಬಟ್ಟೆಯನ್ನು ಖರೀದಿಸಲು ಹೋದಾಗ ಅವರ ಬಳಿ ಲತಾ

ಆರೋಪಿತರು ಆಕೆಗೆ ನೀಡುತ್ತಿದ್ದ ಹಿಂಸೆಯ ಬಗ್ಗೆ ತಿಳಿಸಿದ್ದಳು. ನಂತರ ಅವರಿಂದ ನನಗೆ ಆ ವಿಚಾರ ತಿಳಿಯಿತು.

11. ಆರೋಪಿತರು ನನ್ನ ಮಗಳಿಗೆ ಹೆಚ್ಚಾಗಿ ಹಿಂಸೆ ಕೊಡುತ್ತಿದ್ದ ವಿಚಾರ ನಮಗೆ ತಿಳಿದು ಬಂದ ಬಳಿಕ ನನ್ನ ಗಂಡ ಆರೋಪಿತರ ಮನೆಗೆ ಆ ಬಗ್ಗೆ ಕೇಳಲು ಹೋದಾಗ 2 ನೇ ಆರೋಪಿ ಸುವರ್ಣಮ್ಮ, ನನ್ನ ಗಂಡ ಆಕೆಯನ್ನು ಹೊಡೆಯಲು ಬಂದಿದ್ದಾರೆ ಎಂದು ನನ್ನ ಗಂಡ ಮತ್ತು ಲತಾಳ ಮೇಲೆ ಮೂರ್ತಪ್ಪ ಸುಳ್ಳು ದೂರನ್ನು ಕೊಡಿಸಿದ್ದರು. ನಂತರ ಅಜ್ಜಂಪುರ ಪೊಲೀಸರು ನಮ್ಮನ್ನು ಮತ್ತು ಆರೋಪಿತರನ್ನು ಮತ್ತು ಮೂರ್ತಪ್ಪನನ್ನು ಠಾಣೆಗೆ ಕರೆಸಿ ರಾಜೀ ಮಾಡಿಸಿದರು. ಆಗ ಆರೋಪಿತರು ಲತಾಳಿಗೆ 1 ನೇ ಆರೋಪಿಯೊಂದಿಗೆ ಪ್ರತ್ಯೇಕವಾಗಿ ಇರಲು ಬಿಡುತ್ತೇವೆ, ಆಕೆಗೆ ಯಾವುದೇ ತೊಂದರೆ ಮಾಡುವುದಿಲ್ಲವೆಂದು ಹೇಳಿದ್ದರು ಮತ್ತು ಲತಾ ಸಹ 1 ನೇ ಆರೋಪಿಯೊಂದಿಗೆ ಇರುವುದಾಗಿ ಹೇಳಿದ್ದಳು. ಹಾಗಾಗಿ ಲತಾ ಮತ್ತು 1 ನೇ ಆರೋಪಿ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯಲ್ಲಿಯೇ ಇದ್ದರು.

12. ದಿನಾಂಕ 19.04.2019 ರಂದು ನಾನು ದಂದೂರಿನಲ್ಲಿರುವ ನಮ್ಮ ಮನೆಯಲ್ಲಿದ್ದೆನು. ಆ ದಿನ ರಾತ್ರಿ 7.00 ಗಂಟೆಗೆ ಲತಾ ನನ್ನ ಅಕ್ಕನಾದ ರತ್ನಮ್ಮನಿಗೆ ಕರೆ ಮಾಡಿ 1 ನೇ ಆರೋಪಿ ಆಟೋ ತೆಗೆದುಕೊಳ್ಳಲು ರೂ.50,000/-

ಹಣ ಬೇಕು ಎಂದು ಕೇಳುತ್ತಿರುವುದಾಗಿ ತಿಳಿಸಿದ್ದಾಗಿ ರತ್ನಮ್ಮ ನನಗೆ ಕರೆ ಮಾಡಿ ತಿಳಿಸಿದಳು.

13. ನಂತರ ಅದೇ ದಿನ ರಾತ್ರಿ 10.00 ಗಂಟೆಗೆ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯಲ್ಲಿ ಧರ್ಮರಾಜು, ಸುವರ್ಣಮ್ಮ, ಬಸವರಾಜು, ಭುವನೇಶ್, ಭಾಗ್ಯ, ಮೂರ್ತಪ್ಪ, ಹರ್ಷಿತ, ಭಾಗ್ಯಾಳ ಮಗ, ವಿನಯ್, ಸುಶೀಲಮ್ಮ ಎಲ್ಲಾ ಸೇರಿ ಪ್ಲಾನ್ ಮಾಡಿಕೊಂಡು ನನ್ನ ಮಗಳಾದ ಲತಾಳನ್ನು ಕೊಲೆ ಮಾಡಿದ್ದಾರೆ.

14. ಮಾರನೆಯ ದಿನ ಬೆಳಿಗ್ಗೆ 9.00 ಗಂಟೆಗೆ ನಾನು ನಮ್ಮ ಊರಿನಲ್ಲಿ ಇದ್ದಾಗ ಬುಕ್ಕಾಂಬೂದಿಯ ಚಾಸಾ.13 ರಾಜಪ್ಪರವರು ನನಗೆ ಫೋನ್ ಮಾಡಿ ಲತಾಳ ಕೊಲೆಯಾಗಿರುವುದಾಗಿ ತಿಳಿಸಿದರು. ಕೂಡಲೇ ನಾವು 10.00 ಗಂಟೆಯ ಒಳಗೆ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಗೆ ಹೋದೆವು. ನಾವು ಅಲ್ಲಿಗೆ ಹೋಗಿ ನೋಡಿದಾಗ ಆರೋಪಿತರು ಬೆಡ್ ರೂಮಿನಲ್ಲಿದ್ದ ಅಡಿಕೆ ಬೊಂಬಿಗೆ ಲತಾಳನ್ನು ವೇಲಿನಿಂದ ನೇತು ಹಾಕಿದ್ದರು. ಆಗ ನಾನು, ನನ್ನ ಗಂಡ, ಮಕ್ಕಳಾದ ಶಿಲ್ಪ, ಉದಯ್, ರವಿಕುಮಾರ್, ಸುಧಾ ಮತ್ತು ಇತರರು ಹೋಗಿದ್ದೆವು. ನಾವು ಅಲ್ಲಿಗೆ ಹೋದಾಗ ಆರೋಪಿತರು ಯಾರು ಅಲ್ಲಿ ಇರಲಿಲ್ಲ. ಪೊಲೀಸರು ಅಲ್ಲಿಗೆ ಬಂದಿದ್ದರು. ನಂತರ ತಹಶೀಲ್ದಾರ್ ರವರು ಮತ್ತು ಡಿ ವೈ ಎಸ್ ಪಿ ರವರು ಅಲ್ಲಿಗೆ ಬಂದರು.

ನಂತರ ಅಡಿಕೆ ಬೊಂಬಿನಿಂದ ನನ್ನ ಮಗಳ ಶವವನ್ನು ಕೆಳಗೆ ಇಳಿಸಿದರು.

15. ನಾನು ನೋಡಿದಾಗ ಲತಾಳ ಕತ್ತಿನ ಭಾಗದಲ್ಲಿ ವೈಯರ್ ನಿಂದ ಎಳೆದ ರೀತಿ ಕೆಂಪಗೆ ಆಗಿತ್ತು. ಲತಾಳನ್ನು ನೇತು ಹಾಕಿದ್ದ ರೂಮಿನಲ್ಲಿ ನೆಲದ ಮೇಲೆ ವೈಯರ್ ನ ಹಗ್ಗ, ಬಳೆಯ ಚೂರುಗಳು ಬಿದ್ದಿದ್ದವು. ನಾನು ನೋಡಿದಾಗ ಲತಾಳ ಕಾಲು ನೆಲಕ್ಕೆ ಸ್ವಲ್ಪ ತಾಗಿತ್ತು.

16. ಸಾಕ್ಷಿಯು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯ ಬೆಡ್ ರೂಮಿನಲ್ಲಿ ನನ್ನ ಮಗಳಾದ ಲತಾಳನ್ನು ವೈಯರ್ ಹಗ್ಗದಿಂದ ಕುತ್ತಿಗೆ ಬಿಗಿದು ಸಾಯಿಸಿ, ಅಡಿಕೆ ಬೊಂಬಿಗೆ ವೇಲಿನಿಂದ ನೇಣು ಹಾಕಿರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋದಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

17. ಸಾಕ್ಷಿಯು ಈಗಾಗಲೇ ನಿಪಿ.9 ಎಂದು ಗುರುತಿಸಲಾಗಿರುವ ಫೋಟೋವನ್ನು ನೋಡಿ ಅದರಲ್ಲಿ ನನ್ನ ಮಗಳ ಮೃತ ದೇಹವನ್ನು ನೇಣಿನಿಂದ ಕೆಳಗೆ ಇಳಿಸಿ ಮಲಗಿಸಿರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಆರೋಪಿತರು ವೈಯರ್ ನ ಹಗ್ಗದಿಂದ ಲತಾಳ ಕುತ್ತಿಗೆಯನ್ನು ಬಿಗಿದು ಸಾಯಿಸಿ ನಂತರ ವೇಲಿನಿಂದ ಅಡಿಕೆ ಬೊಂಬಿಗೆ

ನೇಣು ಹಾಕಿರುವುದಾಗಿ ತಿಳಿಯಿತು.

18. ನಾನು ಹೋಗಿ ನೋಡಿದಾಗ ಲತಾಳು ಮೃತಪಟ್ಟ ರೂಮಿನ ನೆಲದ ಮೇಲೆ ಬಿದ್ದಿದ್ದ ವೈಯರ್ ಮತ್ತು ಆಕೆಯನ್ನು ನೇಣು ಹಾಕಿದ್ದ ವೇಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪ್ಲಾಸ್ಟಿಕ್ ವೈಯರ್ ಮತ್ತು ಬಿಳಿ ಬಣ್ಣದ ಮೇಲೆ ತಿಳಿ ಕೇಸರಿ ಬಣ್ಣದ ಹೂವುಗಳ ಚಿತ್ರವಿರುವ ವೇಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.2 ಮತ್ತು 3 ಎಂದು ಗುರುತಿಸಲಾಗಿದೆ.

19. ಮು.ಮಾ.2 ವೈಯರ್ ಈಗಾಗಲೇ ನಿಪಿ.4 ಮತ್ತು ನಿಪಿ.10 ಎಂದು ಗುರುತಿಸಲಾಗಿರುವ ಫೋಟೋಗಳಲ್ಲಿ ಕಂಡು ಬರುತ್ತದೆ. ಲತಾಳ ಮೃತ ದೇಹವನ್ನು ಕೆಳಗೆ ಇಳಿಸಿ ಮಲಗಿಸಿದ ಬಳಿಕ ನಾನು ಆಕೆಯ ಕೈನಲ್ಲಿ, ಕಾಲಿನಲ್ಲಿ ಮತ್ತು ತೊಡೆಯ ಭಾಗಗಳಲ್ಲಿ ಹೊಡೆದಿರುವಂತಹ ಗಾಯಗಳನ್ನು ನೋಡಿದ್ದೇನೆ. ಸಾಕ್ಷಿಯು ಈಗಾಗಲೇ ನಿಪಿ.6, 7 ಮತ್ತು ನಿಪಿ.8 ಎಂದು ಗುರುತಿಸಲಾಗಿರುವ ಫೋಟೋಗಳಲ್ಲಿ ಲತಾಳ ಕುತ್ತಿಗೆ, ಕೈ ಮತ್ತು ಕಾಲಿನಲ್ಲಿ ಆಗಿದ್ದ ಗಾಯಗಳು ಕಂಡು ಬರುತ್ತವೆ ಎಂದು ನುಡಿದಿರುತ್ತಾರೆ.

20. ಲತಾ ತನ್ನ ಎಡಗೈನಲ್ಲಿ ಪೆನ್ನಿನಲ್ಲಿ ಏನೋ ಬರೆದುಕೊಂಡಿರುವುದು ಕಂಡು ಬಂದಿತ್ತು. ಪೊಲೀಸರು ಮತ್ತು ತಹಶೀಲ್ದಾರ್ ರವರು ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಆರೋಪಿತರು ಮೊದಲೆಲ್ಲಾ ಲತಾಳಿಗೆ ಹಿಂಸೆ

ಕೊಟ್ಟು ನಂತರ ಪ್ಲಾನ್ ಮಾಡಿಕೊಂಡು ಆಕೆಯನ್ನು ಕೊಲೆ ಮಾಡಿರುವುದಾಗಿ ತಿಳಿಸಿದ್ದೇನೆ. ನಂತರ ಲತಾಳ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಶಿವಮೊಗ್ಗಕ್ಕೆ ಕಳುಹಿಸಿದರು. ಮಾರನೇ ದಿನ ಪೊಲೀಸರು ನನ್ನನ್ನು ಠಾಣೆಗೆ ವಿಚಾರಣೆಗೆ ಕರೆಸಿದ್ದರು. ಆಗ ನಾನು ಅವರಿಗೆ ಆರೋಪಿತರು ನನ್ನ ಮಗಳಾದ ಲತಾಳನ್ನು ಕರೆದುಕೊಂಡು ಹೋಗಿ 1 ನೇ ಆರೋಪಿಯೊಂದಿಗೆ ಮದುವೆ ಮಾಡಿಕೊಂಡ ವಿಚಾರ ನಂತರ ಆಕೆಗೆ ಆರೋಪಿತರು ಮತ್ತು ಮೇಲೆ ಹೇಳಿದ ವ್ಯಕ್ತಿಗಳು ಹಿಂಸೆ ನೀಡಿದ್ದ ವಿಚಾರ, ನನ್ನ ಗಂಡ ಅದನ್ನು ಪ್ರಶ್ನಿಸಲು ಹೋದಾಗ 2 ನೇ ಆರೋಪಿ ದೂರು ನೀಡಿದ್ದ ವಿಚಾರ ನಂತರ ಆರೋಪಿತರು ಪ್ಲಾನ್ ಮಾಡಿ ನನ್ನ ಮಗಳನ್ನು ಕೊಲೆ ಮಾಡಿದ್ದ ವಿಚಾರ ಮತ್ತು ಎಲ್ಲಾ ವಿಚಾರವನ್ನು ತಿಳಿಸಿದ್ದೇನೆ. ಪೊಲೀಸರು ನಾನು ಹೇಳಿದ್ದನ್ನು ಬರೆದುಕೊಂಡಿದ್ದಾರೆ.

21. ಲತಾಳಿಗೆ ಪೊಲೀಸ್ ಕೆಲಸಕ್ಕೆ ಇಂಟರ್ ವಿವ್ಯ ಗೆ ಲೆಟರ್ ಬಂದಿತ್ತು. ಆ ವಿಚಾರ ಆರೋಪಿತರಿಗೆ ತಿಳಿದಿತ್ತು. 1 ನೇ ಆರೋಪಿಗೆ ಬೋವಿ ಜಾತಿಗೆ ಸೇರಿದ ಹುಡುಗಿಯೊಂದಿಗೆ ಸಂಬಂಧವಿದ್ದ ಬಗ್ಗೆ ಆತನ ತಂದೆ ತಾಯಿ ಮತ್ತು ಸಂಬಂಧಿಕರಿಗೆ ಗೊತ್ತಾಗಿ ಲತಾಳಿಗೆ ಪೊಲೀಸ್ ಕೆಲಸ ಕೊಡಿಸುವುದಾಗಿ ನಂಬಿಸಿ, ಆಕೆಯನ್ನು 1 ನೇ ಆರೋಪಿಯೊಂದಿಗೆ ಮದುವೆ ಮಾಡಿಸಿದ್ದಾರೆ. ಲತಾ ನನಗೆ ಕೊಟ್ಟಿದ್ದ ಮೊಬೈಲ್ ನಲ್ಲಿದ್ದ ಕಾಲ್ ರೆಕಾರ್ಡಿನಲ್ಲಿ ಆ ವಿಚಾರಗಳು ಇದ್ದವು.

22. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಹೊರತುಪಡಿಸಿ ನಾನು ಹೆಸರಿಸಿದ ಇತರೆ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ.

(ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.